| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 35 + 25 = 60 ]
Total No. of Questions : 35 + 25 = 60 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 16
[ Total No. of Printed Pages : 16

ಸಂಕೇತ ಸಂಖ್ಯೆ : **33-K**
**Code No. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ
# Subject : Second Language — KANNADA

ದಿನಾಂಕ : 01. 04. 2009 ]
ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-00 ರವರೆಗೆ ]
ಪರಮಾವಧಿ ಅಂಕಗಳು : 100 ]

[ Date : 01. 04. 2009
[ Time : 10-30 A.M. to 1-00 P.M
[ Max. Marks : 100

**FOR OFFICE USE ONLY**

**PART – A**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|---|---|
| 1. | | 7. | | 13. | | 19. | | 25. | | 31. | |
| 2. | | 8. | | 14. | | 20. | | 26. | | 32. | |
| 3. | | 9. | | 15. | | 21. | | 27. | | 33. | |
| 4. | | 10. | | 16. | | 22. | | 28. | | 34. | |
| 5. | | 11. | | 17. | | 23. | | 29. | | 35. | |
| 6. | | 12. | | 18. | | 24. | | 30. | | × | |

***Total Marks of Part – A***

**PART – B**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 36. | | 41. | | 46. | | 51. | | 56. | |
| 37. | | 42. | | 47. | | 52. | | 57. | |
| 38. | | 43. | | 48. | | 53. | | 58. | |
| 39. | | 44. | | 49. | | 54. | | 59. | |
| 40. | | 45. | | 50. | | 55. | | 60. | |

***Total Marks of Part – B***

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

[ Turn over

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕವು **ಎರಡು** ವಿಭಾಗಗಳನ್ನು ಹೊಂದಿದೆ. ಅವು ಎ – **ವಿಭಾಗ** ಮತ್ತು ಬಿ – **ವಿಭಾಗ.**

ii) ಎ – **ವಿಭಾಗ** 35 ಪ್ರಶ್ನೆಗಳನ್ನು ಹೊಂದಿದೆ ಮತ್ತು ಬಿ – **ವಿಭಾಗ** 25 ಪ್ರಶ್ನೆಗಳನ್ನು ಹೊಂದಿದೆ.

iii) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲೇ ಉತ್ತರಿಸಲು ಸ್ಥಳಾವಕಾಶ ಕೊಡಲಾಗಿದೆ.

iv) ಎ – **ವಿಭಾಗದಲ್ಲಿರುವ** ಸೂಚನೆಗಳನ್ನು ಅನುಸರಿಸಿ ಮತ್ತು ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲಿರುವ ನಾಲ್ಕು ಪರ್ಯಾಯ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿಯೇ ಪೂರ್ಣ ಉತ್ತರವನ್ನು ಬರೆಯಿರಿ.

v) ಬಿ – **ವಿಭಾಗದ** ಪ್ರತಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

## ಎ – ವಿಭಾಗ

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಪೂರ್ಣ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಬರೆಯಿರಿ : $35 \times 1 = 35$

1. ರಾಮಚಂದ್ರರಾಯರ ಉಡುಪು ಏನನ್ನು ಪ್ರತಿನಿಧಿಸುತ್ತಿತ್ತು ?

(ಎ) ನಾಡಗೀತೆಯನ್ನು (ಬಿ) ಕನ್ನಡ ಧ್ವಜವನ್ನು

(ಸಿ) ರಾಷ್ಟ್ರಗೀತೆಯನ್ನು (ಡಿ) ರಾಷ್ಟ್ರ ಧ್ವಜವನ್ನು

*ಉತ್ತರ :* ______

2. ರಾಮಚಂದ್ರರಾಯರನ್ನು ಜನ ಹೀಗೆಂದು ಕರೆಯುತ್ತಿದ್ದರು :

(ಎ) ಬಡಾ ಗಾಂಧಿ (ಬಿ) ಮೈಸೂರು ಗಾಂಧಿ

(ಸಿ) ನಿಜವಾದ ಗಾಂಧಿ (ಡಿ) ಛೋಟಾ ಗಾಂಧಿ

*ಉತ್ತರ :* ______

3. ಲಾಲ್‌ಬಾಗ್‌ನ ಹೆಸರನ್ನು ಹೇಳಿದೊಡನೆ ಇವರು ರಸಸಮಾಧಿಯಲ್ಲಿ ಮುಳುಗೇಳುತ್ತಾರೆ :

(ಎ) ಇಂಜಿನಿಯರುಗಳು (ಬಿ) ಕವಿಗಳು

(ಸಿ) ವಿದ್ಯಾರ್ಥಿಗಳು (ಡಿ) ನಿಸರ್ಗ ಶಿವಾರಾಧಕರು

*ಉತ್ತರ :* ______

4. ದೇ. ಜವರೇಗೌಡರು ಜನಿಸಿದ ಸ್ಥಳ

(ಎ) ಚಕ್ಕೆರೆ (ಬಿ) ಚಳ್ಳಗೆರೆ

(ಸಿ) ಚಿಕ್ಕಮಗಳೂರು (ಡಿ) ಬೆಂಗಳೂರು

*ಉತ್ತರ :* ______

5. ಬಯಲು ಸೀಮೆಯಲ್ಲಿ ಏನು ಹಾಳಾಗಿದೆ ಎಂದು ಶೇಖರ ಹೇಳಿದ ?

(ಎ) ನದಿಗಳು (ಬಿ) ಸಮುದ್ರಗಳು

(ಸಿ) ನೀರಿನ ಅರವಟ್ಟಿಗೆಗಳು (ಡಿ) ಕಲ್ಲೊಡ್ಡು ಗೋಕುಂಟೆಗಳು

*ಉತ್ತರ :* ______

6. ಪ್ರವಾಸಕ್ಕೆ ಹೋದಾಗ ಶೇಖರನು ಏನನ್ನು ಕಲಿತು ಬಂದಿದ್ದನು ?

(ಎ) ಪಾಠ ಓದುವುದು (ಬಿ) ಮಳೆ ಕೊಯ್ಲು

(ಸಿ) ಬಾವಿ ತೋಡುವುದು (ಡಿ) ಬೋರ್‌ವೆಲ್ ಹಾಕುವುದು

*ಉತ್ತರ :* ____________________

7. ದ.ರಾ. ಬೇಂದ್ರೆಯವರ ಈ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ :

(ಎ) ಉಯ್ಯಾಲೆ (ಬಿ) ಸಖೀ ಗೀತ

(ಸಿ) ಅರಳುಮರಳು (ಡಿ) ನಾಕು ತಂತಿ

*ಉತ್ತರ :* ____________________

8. ಇಳೆಗೆ ಅಹಿಂಸೆಯ ತತ್ವವನ್ನು ಸಾರಿದವರು

(ಎ) ಜವಹರಲಾಲ್ ನೆಹರೂ (ಬಿ) ವಲ್ಲಭಭಾಯಿ ಪಟೇಲ್

(ಸಿ) ಮಹಾತ್ಮ ಗಾಂಧಿ (ಡಿ) ಲಾಲ್‌ಬಹದ್ದೂರ್ ಶಾಸ್ತ್ರಿ

*ಉತ್ತರ :* ____________________

9. ಧ್ಯಾನವೆಂಬ ಊರುಗೋಲಿಗೆ ಬೇಕಾದದ್ದು

(ಎ) ಅಂತರವಾಣಿಯನ್ನು ಆಲಿಸಲು (ಬಿ) ಅನ್ಯಾಯವನ್ನು ಅಳಿಸಲು

(ಸಿ) ಆಧ್ಯಾತ್ಮ ಪಥದಲ್ಲಿ ಮುಂದೆ ಹೆಜ್ಜೆಯನಿಡಲು (ಡಿ) ದೋಷಗಳನ್ನು ದಹಿಸಿ ನಿವಾರಿಸಲು

*ಉತ್ತರ :* ____________________

10. ಪ್ರೊ. ಈರಣ್ಣ ಇಟಗಿಯವರ ಕಾಲ

(ಎ) 1960 (ಬಿ) 1950

(ಸಿ) 1970 (ಡಿ) 1980

*ಉತ್ತರ :* ____________________

11. ಹಡಗನ್ನು ಕವಿ ಹೀಗೆಂದು ಕರೆದಿದ್ದಾರೆ :

(ಎ) ಭಾರತ ದೇಶ (ಬಿ) ಸಂಕ್ಷಿಪ್ತ ಬ್ರಹ್ಮಾಂಡ

(ಸಿ) ಪಾತಾಳ ಲೋಕ (ಡಿ) ಚೀನಾ ದೇಶ

*ಉತ್ತರ :* ____________________

12. ಕವಿಗಳು ಯಾರ ಒತ್ತಾಯಕ್ಕೆ ತಿರುಪತಿಗೆ ಹೋದರು ?

(ಎ) ಹೆಂಡತಿ (ಬಿ) ಮಗ

(ಸಿ) ಸ್ನೇಹಿತ (ಡಿ) ಮಾವ

*ಉತ್ತರ :* ______

13. 'ದರ್ಶನ' ಪದ್ಯಭಾಗದ ಆಕರ ಗ್ರಂಥ

(ಎ) ದಕ್ಷಿಣ ಕನ್ನಡದ ಶತಮಾನದ ಕಾವ್ಯ (ಬಿ) ವರ್ತಮಾನದ ಮುಖಗಳು

(ಸಿ) ನೆಲ ಮುಗಿಲುಗಳ ಮಧ್ಯೆ (ಡಿ) ಮೊಗಸಾಲೆಯ ನೆನಪುಗಳು

*ಉತ್ತರ :* ______

14. ಜನ ಮಣ್ಣು ಮುಕ್ಕಿ ಮರುಳಾಗುವುದು ಈ ಸಂದರ್ಭದಲ್ಲಿ :

(ಎ) ಜೀವಂತ ಇರುವಾಗ (ಬಿ) ಊಟ ಮಾಡುವಾಗ

(ಸಿ) ಯುದ್ಧ ಮಾಡುವಾಗ (ಡಿ) ಪಂಚೇಂದ್ರಿಯಗಳು ಇರುವಾಗ

*ಉತ್ತರ :* ______

15. ಏನನ್ನು ಸುಟ್ಟರೆ ಭಸ್ಮವಿಲ್ಲ ?

(ಎ) ಬೆರಣಿಯನ್ನು (ಬಿ) ಕಟ್ಟಿಗೆಯನ್ನು

(ಸಿ) ಪಾದರಸವನ್ನು (ಡಿ) ಕರ್ಪೂರವನ್ನು

*ಉತ್ತರ :* ______

16. ಕ್ರಿಯಾಪದದ ಮೂಲರೂಪ

(ಎ) ಕ್ರಿಯಾ ವಿಶೇಷಣ (ಬಿ) ಧಾತು

(ಸಿ) ನಾಮಪದ (ಡಿ) ತದ್ಧಿತಾಂತ

*ಉತ್ತರ :* ______

17. 'ಜಗದೀಶ್ವರ' ಪದವನ್ನು ಬಿಡಿಸಿ ಬರೆದಾಗ ಪಡೆಯುವ ರೂಪ

(ಎ) ಜಗದ + ಈಶ್ವರ (ಬಿ) ಜಗತ್ + ಈಶ್ವರ

(ಸಿ) ಜಗತ್ತಾ + ಈಶ್ವರ (ಡಿ) ಜಗ + ಈಶ್ವರ

*ಉತ್ತರ :* ______

18. 'ಅಕ್ಷಯ' ಪದದ ವಿರುದ್ಧಾರ್ಥಕ ಪದ

(ಎ) ಅನಕ್ಷಯ (ಬಿ) ಕ್ಷೀಣ

(ಸಿ) ಅಭಿವೃದ್ಧಿ (ಡಿ) ಅಕ್ಷೀಣ

*ಉತ್ತರ :* __________

19. 'ಓದು' ಪದವನ್ನು ಭೂತಕಾಲದಲ್ಲಿ ಬರೆಯುವಾಗ ಪಡೆಯುವ ರೂಪ

(ಎ) ಓದುತ್ತಾನೆ (ಬಿ) ಓದಿದನು

(ಸಿ) ಓದನು (ಡಿ) ಓದುವನು

*ಉತ್ತರ :* __________

20. 'ಬಣ್ಣ' ಪದದ ತತ್ಸಮ ರೂಪ

(ಎ) ರಂಗು (ಬಿ) ಬಣ

(ಸಿ) ವರ್ಣ (ಡಿ) ವರುಣ

*ಉತ್ತರ :* __________

21. ಸಪ್ತಸಾಗರ ಇದು ಈ ಸಮಾಸಕ್ಕೆ ಉದಾಹರಣೆ :

(ಎ) ಅರಿ (ಬಿ) ದ್ವಿಗು

(ಸಿ) ಅಂಶೀ (ಡಿ) ದ್ವಂದ್ವ

*ಉತ್ತರ :* __________

22. 'ತಾಯಿಯಲ್ಲಿ' ಇಲ್ಲಿರುವ ವಿಭಕ್ತಿ

(ಎ) ಷಷ್ಠೀ (ಬಿ) ಸಪ್ತಮೀ

(ಸಿ) ಸಂಬೋಧನಾ (ಡಿ) ಪ್ರಥಮಾ

*ಉತ್ತರ :* __________

23. 'ಸನ್ಯಾಸಿ' ಪದದ ಸ್ತ್ರೀಲಿಂಗವಾಚಿ ಪದ

(ಎ) ಸ್ತ್ರೀ ಸನ್ಯಾಸಿ (ಬಿ) ಸನ್ಯಾಸಿ ನಾರಿ

(ಸಿ) ಸನ್ಯಾಸಿನಿ (ಡಿ) ಮಹಿಳಾ ಸನ್ಯಾಸಿ

*ಉತ್ತರ :* __________

24. ಎರಡು ವಸ್ತುಗಳಿಗಿರುವ ಗುಣಸ್ವಭಾವದ ಹೋಲಿಕೆಯನ್ನು ಹೇಳುವ ಅಲಂಕಾರ

(ಎ) ರೂಪಕ (ಬಿ) ಶ್ಲೇಷ

(ಸಿ) ಉಪಮಾ (ಡಿ) ಉತ್ಪ್ರೇಕ್ಷೆ

*ಉತ್ತರ :* ______

25. 'ನಗುನಗುತ' ಎಂಬುದು ಈ ವ್ಯಾಕರಣಾಂಶಕ್ಕೆ ಉದಾಹರಣೆ :

(ಎ) ಜೋಡುನುಡಿ (ಬಿ) ಅನುಕರಣಾವ್ಯಯ

(ಸಿ) ದ್ವಿರುಕ್ತಿ (ಡಿ) ಪಡೆನುಡಿ

*ಉತ್ತರ :* ______

26. 'ಅಣ್ಣ' ಪದದ ಬಹುವಚನ ರೂಪ

(ಎ) ಅಣ್ಣರು (ಬಿ) ಅಣ್ಣಗಳು

(ಸಿ) ಅಣ್ಣವಂದಿರು (ಡಿ) ಅಣ್ಣಂದಿರು

*ಉತ್ತರ :* ______

27. 'ಅಯ್ಯೋ'.... ಎನ್ನುವುದು ಈ ವಾಚಕ ಪದ :

(ಎ) ಉದ್ಗಾರ ವಾಚಕ (ಬಿ) ಅನುಕರಣ ವಾಚಕ

(ಸಿ) ಭಯವಾಚಕ (ಡಿ) ಪ್ರಶ್ನವಾಚಕ

*ಉತ್ತರ :* ______

28. 'ಸರಸರ' ಇದೊಂದು

(ಎ) ನುಡಿಗಟ್ಟು (ಬಿ) ಅನುಕರಣಾವ್ಯಯ

(ಸಿ) ದ್ವಿರುಕ್ತಿ (ಡಿ) ಜೋಡುನುಡಿ

*ಉತ್ತರ :* ______

29. ಇದು ಅನ್ಯದೇಶ್ಯ ಪದ :

(ಎ) ರೈನ್ ಸೆಂಟರ್ (ಬಿ) ಅಂತರ್ಜಾಲ

(ಸಿ) ಇಂಗು ಕೊಳ (ಡಿ) ಮಳೆ ಕೊಯ್ಲು

*ಉತ್ತರ :* ______

30. ಭಳೆಗಾರ – ಪದದ ಶುದ್ಧ ರೂಪ

(ಎ) ಬಳೆ ಮಾರುವವ (ಬಿ) ಭಾಳೆಗಾರ

(ಸಿ) ಬಳೆಗಾರ (ಡಿ) ಬಳೆ ಹೊರುವವ

*ಉತ್ತರ :* ____________________

31. ಸರ್ವನಾಮ ಪದಕ್ಕೆ ಉದಾಹರಣೆ

(ಎ) ಕಮಲ (ಬಿ) ನಾವು

(ಸಿ) ಎರಡು (ಡಿ) ರಾಮನಾಥ

*ಉತ್ತರ :* ____________________

32. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅದು

(ಎ) ಸಾಮಾನ್ಯ ವಾಕ್ಯ (ಬಿ) ಪ್ರಧಾನ ವಾಕ್ಯ

(ಸಿ) ಮಿಶ್ರ ವಾಕ್ಯ (ಡಿ) ಸಂಯೋಜಿತ ವಾಕ್ಯ

*ಉತ್ತರ :* ____________________

33. ಇದು ಅಂಕಿತ ನಾಮಪದಕ್ಕೆ ಉದಾಹರಣೆ :

(ಎ) ಅದು (ಬಿ) ಅವರು

(ಸಿ) ಕುರುಡ (ಡಿ) ಶಾರದೆ

*ಉತ್ತರ :* ____________________

34. ತ್ರಿಪದಿಯಲ್ಲಿನ ಸಾಲುಗಳ ಸಂಖ್ಯೆ

(ಎ) ಎರಡು (ಬಿ) ಮೂರು

(ಸಿ) ನಾಲ್ಕು (ಡಿ) ಐದು

*ಉತ್ತರ :* ____________________

35. ವಿಶ್ವಾಸನು ಶಾಲೆಯಲ್ಲಿ ಪಾಠವನ್ನು ಓದುತ್ತಿದ್ದಾನೆ. ಈ ವಾಕ್ಯದಲ್ಲಿರುವ ಕರ್ಮಪದ

(ಎ) ಶಾಲೆಯಲ್ಲಿ (ಬಿ) ವಿಶ್ವಾಸನು

(ಸಿ) ಪಾಠವನ್ನು (ಡಿ) ಓದುತ್ತಿದ್ದಾನೆ

*ಉತ್ತರ :* ____________________

[ Turn over

## ಬಿ – ವಿಭಾಗ

ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20

36. ರಾಮಕೃಷ್ಣನೇ ಸತ್ತಿರುವನೆಂದು ರಾಣಿ ದೊರೆಗೆ ಹೇಳಲು ಕಾರಣವೇನು ?

37. ಪೂರ್ಣಿಮಾಳ ಗಂಡನ ಬೆನ್ನು ನೀಲಿಗಟ್ಟಿದ್ದು ಏಕೆ ?

38. ಬಾಲ್ಯದಲ್ಲಿ ಕಾರಂತರಿಗೆ ಸಿಕ್ಕ ಕಲಾಶ್ರೀಮಂತಿಕೆ ಯಾವ ಬಗೆಯದು ?

39. ರಾಮಚಂದ್ರರಾಯರು ಮಾಡಿದ ಎರಡು ಮುಖ್ಯ ಕಾರ್ಯಗಳು ಯಾವುವು ?

40. ಮರಿಗೌಡರ ಕಳಕಳಿ ಮತ್ತು ಹೇರಾಸೆ ಏನು ?

41. ಮಳೆ ನೀರು ಭೂಮಿಯೊಳಕ್ಕೆ ಇಳಿಯುವುದು ಕಡಿಮೆಯಾಗುತ್ತಿದೆ. ಏಕೆ ?

42. ಗಾಂಧೀಜಿಯನ್ನು 'ಹಿರಿಯ ತಂದೆ' ಎಂದು ಏಕೆ ಕರೆಯಲಾಗಿದೆ ?

43. ಬಾಲೆ ತನ್ನ ತೌರೂರು ಎಲ್ಲಿಹುದೆಂದು ಬಳೆಗಾರನಿಗೆ ಹೇಳಿದಳು ?

44. ಧ್ಯಾನವೆಂಬ ಅಗ್ನಿಯು ಏನನ್ನು ದಹಿಸಿ ನಿವಾರಿಸುವುದು ?

45. ಸತಿ ಸುತರು ಏಕೆ ನಮ್ಮನ್ನು ಕಾಯುವುದಿಲ್ಲ ?

ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿ : $8 \times 2 = 16$

46. ''ತಾನು ಏನು ಅಲ್ವೋ, ಅದನ್ನು ಮಾಡೋದೇ ಅಭಿನಯ.''

47. 'ಇದು ನಿನ್ನ ಪೂರ್ವಜನ್ಮದ ಪಾಪದ ಫಲ.'

48. 'ನೀರಿನ ತಳವೇ ನಿನ್ನ ತವರು, ಬಾ.'

49. ಹೂಂ, ನಿಮ್ಮ ಕೈಹಿಡಿದ ಮೇಲೆ ಇನ್ನೂ ಏನೇನು ಮಾಡಬೇಕೊ ?

50. ಇದು ಬ್ರಹ್ಮಾಂಡ – ನೂರು ಭಾಷೆಗಳ ನವಖಂಡ !

51. ನಿನ್ನೆ ನನಗಿಲ್ಲಿ ಹಸಿರು ಕಾರ್ಡ್ ಸಿಕ್ಕಿದೆ.

52. ಕೊಂಡ್ಹೋಗೊ ಎನ್ನ ತವರೀಗೆ.

53. ಸಾಮರ್ಥ್ಯಕ್ಕಂಜುವರು ಆಕಾರಕ್ಕಂಜುವರೆ

54. ಕೆಳಗಿನವುಗಳಲ್ಲಿನ ಯಾವುದಾದರೂ **ಒಂದು** ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ : $1 \times 3 = 3$

— ಕೈ ಕೆಸರಾದರೆ ಬಾಯಿ ಮೊಸರು.

— ಹಾಸಿಗೆ ಇದ್ದಷ್ಟು ಕಾಲು ಚಾಚು.

— ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು.

55. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 4 = 4

ಕಾಲನ ದೂತರು ______________________________

______________________________

______________________________

______________________________ ಸಿಕ್ಕಲು ಬೇಡಿ.

ಅಥವಾ

ಪಂಪ ______________________________

______________________________

______________________________

______________________________ ಝುರಿ.

56. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

— ಭರತಕುಮಾರ ತನ್ನ ತಾಯಿಯನ್ನು ಭೂಮಿಯ ಮೇಲೆ ಕಂಡುಕೊಂಡ ಬಗೆ ಹೇಗೆ ?
— ಕೇದಾರ ಏರುವ ದಾರಿಯ ಪ್ರಕೃತಿ ವೈಭವವನ್ನು ಸಂಗ್ರಹಿಸಿ ಬರೆಯಿರಿ.
— ಮಗುವಿನ ಕರೆ ತಾಯಿಯಲ್ಲಿ ಜೀವನ ಪ್ರೀತಿಯನ್ನು ಹೇಗೆ ಮೂಡಿಸಿತು ?

57.

58. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದಕ್ಕೆ** ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಕವಿ ಎಂತಹ ಯುಗಾದಿಯ ನಿರೀಕ್ಷೆಯಲ್ಲಿದ್ದಾನೆ ಎಂಬುದನ್ನು ವಿವರಿಸಿ.

— ಭರತ ಚಕ್ರಿಯು ರತ್ನ ಸಿಂಹಾಸನದಲ್ಲಿ ಶೋಭಿಸಿದ ಬಗೆಯನ್ನು ವಿವರಿಸಿ.

59. ನೀವು ಬೆಂಗಳೂರಿನ ಖಾಸಗಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ನಿರ್ಮಲ' ಎಂದು ಭಾವಿಸಿ, ಶಾಲಾ ಪ್ರವಾಸಕ್ಕೆ ಹೋಗಲು 500 ರೂಪಾಯಿಗಳನ್ನು ಕಳುಹಿಸಿಕೊಡುವಂತೆ ಪ್ರಾರ್ಥಿಸಿ, ಮೈಸೂರು ನಗರದಲ್ಲಿರುವ ನಿಮ್ಮ ತಂದೆಯವರಿಗೆ ಒಂದು ಪತ್ರ ಬರೆಯಿರಿ.

ಅಥವಾ

ಬೆಂಗಳೂರು ಮಹಾನಗರದಲ್ಲಿ ವಾಹನಗಳ ದಟ್ಟಣೆಯಿಂದ ಆಗುತ್ತಿರುವ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಗಂಭೀರ ಕ್ರಮ ಕೈಗೊಳ್ಳುವಂತೆ ಮಾಲಿನ್ಯ ಮಂಡಳಿಗೆ ಒಂದು ಮನವಿ ಪತ್ರ ಬರೆಯಿರಿ. $1 \times 5 = 5$

60. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ದೂರದರ್ಶನ – ಉಪಯೋಗ, ದುಷ್ಪರಿಣಾಮ

— ರಾಷ್ಟ್ರೀಯ ಹಬ್ಬಗಳು – ಆಚರಣೆ

— ಕ್ರೀಡೆಗಳು